ಗಡಿನಾಡ ಪ್ರದೇಶಗಳಲ್ಲಿ ಕನ್ನಡ ಅಭಿವೃದ್ಧಿ

32(32): ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ, ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗಡಿನಾಡು ಪ್ರದೇಶಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಇದುವರೆವಿಗೂ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ; ಇದಕ್ಕಾಗಿ ರಾಜ್ಯ ಸರ್ಕಾರದಿಂದ ಎಷ್ಟು ಹಣವನ್ನು ಮೀಸಲಿರಿಸಲಾಗಿದೆ? (ಕಾರ್ಯಕ್ರಮಗಳ ವಿವರವನ್ನು ತಿಳಿಸುವುದು);

ಆ) ಬಾಗೇಪಲ್ಲಿ ಗುಡಿಬಂಡೆ ತಾಲ್ಲೂಕುಗಳು ಆಂಧ್ರದ ಗಡಿ ಭಾಗದಲ್ಲಿದ್ದು ಆಂಧ್ರ ಪ್ರದೇಶಕ್ಕೆ ಹೊಂದಿಕೊಂಡಿರುವ ಈ ಭಾಗದಲ್ಲಿ ಅತಿ ಹೆಚ್ಚಾಗಿ ತೆಲುಗು ಭಾಷೆಯನ್ನು ಬಳಸುತ್ತಿದ್ದು, ಇದನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗಿದೆಯೇ; ಈ ಭಾಗದಲ್ಲಿ ಕನ್ನಡ ಅಭಿವೃದ್ಧಿಗೆ ಏನು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ?

ಇ) ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಲ್ಲಿ ಕನ್ನಡ ಭವನಗಳನ್ನು ನಿರ್ಮಿಸಲಾಗಿದೆಯೇ? ನಿರ್ಮಿಸಲಾಗದಿದ್ದಲ್ಲಿ ಏನು ಕ್ರಮ ಕೈಗೊಳ್ಳಲಾಗುವುದು?

ಈ) ಜಿಲ್ಲೆಯಲ್ಲಿ ಜಾನಪದ ಕಲೆಯನ್ನು ಉಳಿಸುವುದಕ್ಕಾಗಿ ಹಾಕಿ ಕೊಂಡಿರುವಂತಹ ಯೋಜನೆಗಳೇನು? ಇದಕ್ಕಾಗಿ ಮೀಸಲಿಟ್ಟಿರುವ ಅನುದಾನ ಎಷ್ಟು?

ಶ್ರೀ ಗೋವಿಂದ ಎಂ. ಕಾರಜೋಳ (ಕನ್ನಡ ಮತ್ತು ಸಂಸ್ಕೃತಿ, ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು):

ಅ) ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಕನ್ನಡ ಅಭಿವೃದ್ಧಿ ಯೋಜನೆ ಕುರಿತಂತೆ ಬಾಗೇಪಲ್ಲಿ ಗುಡಿಬಂಡೆ ತಾಲ್ಲೂಕುಗಳಲ್ಲಿ ಗಡಿನಾಡು ಜಾಗೃತಿ ಸಮಾವೇಶ, ಗಡಿನಾಡು ಉತ್ಸವ ಹಾಗೂ ಕನ್ನಡೇತರರಿಗೆ ಕನ್ನಡ ಕಲಿಕಾ ತರಗತಿಯನ್ನು ಏರ್ಪಡಿಸಲು ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಈ ಮೂಲಕ ಕನ್ನಡ ವಾತಾವರಣವನ್ನುಂಟು ಮಾಡುವುದು ಇಲ್ಲಿಯ ಆಶಯವಾಗಿರುತ್ತದೆ.

ಇ) ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಈ ಸಾಲಿನಲ್ಲಿ ಗುಡಿಬಂಡೆ ತಾಲ್ಲೂಕಿನ ಬೀಚಗಾನಹಳ್ಳಿಯಲ್ಲಿ ರೂ.30.00 ಲಕ್ಷದ ಅಂದಾಜಿನಲ್ಲಿ ಸಾಂಸ್ಕೃತಿಕ ಭವನ ಹಂಪಸಂದ್ರ ಗ್ರಾಮದಲ್ಲಿ

ಗ್ರಂಥಾಲಯ ಹಾಗೂ ಬಾಗೇಪಲ್ಲಿ ತಾಲ್ಲೂಕು ಚೇಳೂರಿನಲ್ಲಿ ಶಿಕ್ಷಕರ ಸಮುಚ್ಛಯ ರೂ. 18.00 ಲಕ್ಷಗಳ ಅಂದಾಜಿನಲ್ಲಿ ನಿರ್ಮಿಸಲು ನೀಲಿ ನಕಾಶೆ ಹಾಗೂ ಅಗತ್ಯ ಸಂಬಂಧಪಟ್ಟ ದಾಖಲೆಗಳನ್ನು ನೀಡುವಂತೆ ಗ್ರಾಮ ಪಂಚಾಯತಿಗಳಿಗೆ ಪತ್ರ ಬರೆದು ಕ್ರಮ ವಹಿಸಲಾಗಿದೆ.

ಈ) ಅ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 2006 ರಿಂದ ಜಾನಪದ ಜಾತ್ರೆ ಕಾರ್ಯಕ್ರಮವನ್ನು ಹಮ್ಮಿಕೊಂಡು ಕಾರ್ಯರೂಪಕ್ಕೆ ತರುತ್ತಿದೆ. ಈ ಕಾರ್ಯಕ್ರಮದಡಿ ನಾಡಿನಾದ್ಯಂತ ಇರುವ ವಿವಿಧ ಜಾನಪದ ಕಲಾ ಪ್ರಕಾರಗಳನ್ನು ಗುರುತಿಸಿ ಅವರಿಗೆ ವೇದಿಕೆಗಳಲ್ಲಿ ಜಾನಪದ ಕಲಾ ಪ್ರದರ್ಶನ ನೀಡಲು ಅವಕಾಶ ಮಾಡಿಕೊಡಲಾಗುತ್ತಿದೆ. ಅಲ್ಲದೆ ಉತ್ಸವ ಹಾಗೂ ಸಂಘ ಸಂಸ್ಥೆಗಳು ಏರ್ಪಡಿಸುವ ಸಮಾರಂಭಗಳಲ್ಲಿ ಜನಪದ ಕಲಾತಂಡಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗುವುದು.

ಆ) ಜೊತೆಗೆ ಆಯಾ ಜಾನಪದ ಕಲಾಪ್ರಕಾರಗಳಲ್ಲಿ ನುರಿತ ಕಲಾವಿದರನ್ನು ಆಯ್ಕೆ ಮಾಡಿ ಅವರ ಮೂಲಕ ತರಬೇತಿಯನ್ನು ನೀಡಿ ಜಾನಪದ ಜಾತ್ರೆ ಸಂದರ್ಭದಲ್ಲಿ ಪ್ರದರ್ಶಿಸಲು ಅವಕಾಶ ಮಾಡಿ ಕೊಡಲಾಗುತ್ತಿದೆ. ಜಾನಪದ ಜಾತ್ರೆ ಕಾರ್ಯಕ್ರಮವನ್ನು ವಾರ್ಷಿಕ ಅವಧಿಯಲ್ಲಿ ಬೆಂಗಳೂರಿನ ಬಡಾವಣೆಗಳಲ್ಲಿ ಹಾಗೂ ವಿವಿಧ ಜಿಲ್ಲೆಗಳಲ್ಲಿ 9 ಜಾನಪದ ಜಾತ್ರೆಗಳನ್ನು ಏರ್ಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿಯೂ ಜಾನಪದ ಜಾತ್ರೆ ಏರ್ಪಡಿಸಲು ಯೋಜನೆ ರೂಪಿಸಲಾಗುವುದು.

ಇ) ಜಾನಪದ ಜಾತ್ರೆ ಕಾರ್ಯಕ್ರಮಕ್ಕೆ 2006 ರಿಂದ ಆಯಾ ಆರ್ಥಿಕ ವರ್ಷದಲ್ಲಿ ರೂ. 2.00 ಕೋಟಿಗಳನ್ನು ಮೀಸಲಿರಿಸಲಾಗುತ್ತಿದೆ.

ಅನುಬಂಧ

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ವತಿಯಿಂದ ಕೈಗೊಂಡ ಕಾರ್ಯಕ್ರಮಗಳ ವಿವರ

ಅ. 2010–11ನೇ ಸಾಲಿನ ಗಡಿ ಉತ್ಸವಗಳನ್ನು ಆಚರಿಸಲು 19 ಜಿಲ್ಲೆಗಳ ಸಹಾಯಕ ನಿರ್ದೇಶಕರಿಗೆ ರೂ. 2.35 ಲಕ್ಷಗಳಂತೆ ಒಟ್ಟು ರೂ. 44.65 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಆ) 52 ಗಡಿ ತಾಲ್ಲೂಕು ಪ್ರದೇಶಗಳಲ್ಲಿ ಕನ್ನಡ ಜಾಗೃತಿ ಸಮಾವೇಶವನ್ನು ಏರ್ಪಡಿಸಲು ರೂ. 6.24 ಲಕ್ಷಗಳ ಹಂಚಿಕೆಯನ್ನು ಮಾಡಿಕೊಳ್ಳಲಾಗಿದೆ. ಈ ಅನುದಾನದಲ್ಲಿ 52 ಗಡಿ ತಾಲ್ಲೂಕುಗಳಿಗೆ ಒಂದು

ತಾಲ್ಲೂಕಿಗೆ 2 ಕಾರ್ಯಕ್ರಮಗಳನ್ನು ಏರ್ಪಡಿಸಲು ಕಾರ್ಯಕ್ರಮ ಒಂದಕ್ಕೆ ರೂ. 6,000/– ಗಳಂತೆ ಅನುದಾನವನ್ನು ಜಿಲ್ಲಾ ಸಹಾಯಕ ನಿರ್ದೇಶಕರುಗಳಿಗೆ ಬಿಡುಗಡೆ ಮಾಡಲಾಗಿದೆ.

ಇ) 19 ಗಡಿನಾಡು ಜಿಲ್ಲೆಗಳಲ್ಲಿನ ಗಡಿ ತಾಲ್ಲೂಕುಗಳಲ್ಲಿರುವ ಕನ್ನಡೇತರರಿಗೆ ಕನ್ನಡ ಕಲಿಕಾ ತರಗತಿಯನ್ನು ಏರ್ಪಡಿಸಲು ರೂ. 35.00 ಲಕ್ಷಗಳಂತೆ 3 ಕಲಿಕಾ ತರಗತಿಗಳನ್ನು ಏರ್ಪಡಿಸಲು ಒಟ್ಟು ರೂ.6.65 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೈಗೊಂಡ ಕಾರ್ಯಕ್ರಮಗಳ ವಿವರ

1. ಉತ್ತರ ಕನ್ನಡ ಜಿಲ್ಲೆಯ ಜೋಯಿಡಾದಲ್ಲಿ ಗಡಿನಾಡು ಉತ್ಸವ ಕಾರ್ಯಕ್ರಮವನ್ನು ದಿನಾಂಕ:16–1–2009 ರಂದು ಏರ್ಪಡಿಸಲಾಗಿದೆ.

2. ರಾಜ್ಯದಲ್ಲಿ ಗಡಿ ಜಿಲ್ಲೆ/ ತಾಲ್ಲೂಕುಗಳಾದ ಮಧುಗಿರಿ, ಕರುಣಿ, ಹುಕ್ಕೇರಿ ತಾಲ್ಲೂಕು, ಬಳ್ಳಾರಿ, ಅಂಕೋಲಾ, ಸಂಕೇಶ್ವರ, ಸಿರಗುಪ್ಪ, ಜೋಯಿಡಾ, ಗೌರಿಬಿದನೂರಿನಲ್ಲಿ ಕನ್ನಡ ಗಡಿ ಭವನ ನಿರ್ಮಾಣಕ್ಕೆಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ವಂತಿಗೆಯಾಗಿ ತಾಲ್ಲೂಕು ಕೇಂದ್ರಕ್ಕೆ ರೂ. 5.00 ಲಕ್ಷ ಹಾಗೂ ಜಿಲ್ಲಾ ಕೇಂದ್ರಕ್ಕೆ ರೂ. 7.00 ಲಕ್ಷಗಳ ಧನ ಸಹಾಯವನ್ನು ಸಂಬಂಧ ಪಟ್ಟ ಜಿಲ್ಲಾಧಿಕಾರಿಗಳ ಮೂಲಕ ಬಿಡುಗಡೆ ಮಾಡಿದೆ.

3. ಅ) ಭಾಷಾ ಭಾವೈಕ್ಯತಾ ಸಮಾವೇಶ: ದಿನಾಂಕ: 6–11–2009 ರಿಂದ 13–11–2009 ರವರೆಗೆ 8 ದಿನಗಳ ಕಾಲ ಕರ್ನಾಟಕದ ಗಡಿ ಭಾಗವಾದ ಕಾಸರಗೋಡಿನಲ್ಲಿ ಭಾಷಾ ಭಾವೈಕ್ಯತಾ ಸಮಾವೇಷವು ರಾಜ್ಯ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿ ಪಡೆದ ಕನ್ನಡ ತುಳು ಮತ್ತು ಕೊಂಕಣಿ ಚಲನಚಿತ್ರಗಳನ್ನು, ವಿಚಾರ ಪ್ರಚೋದಕ ನಾಟಕಗಳನ್ನು ಹಾಗೂ ಯಕ್ಷಗಾನ ಶಾಸ್ತ್ರೀಯ ನೃತ್ಯ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಿದ್ದಲ್ಲದೆ ಉದ್ಘಾಟನೆಯ ದಿನ ಅಭೂತಪೂರ್ವ ಜಾನಪದ ಕಲಾವಿದರ ಮೆರವಣಿಗೆ ಮತ್ತು ಪ್ರದರ್ಶನಗಳನ್ನು ಏರ್ಪಡಿಸಲಾಗಿದೆ.

ಆ) ಕಾರವಾರದ ಸದಾಶಿವಘಡದಲ್ಲಿ ದಿನಾಂಕ:10–4–2011 ಮತ್ತು 11–4–2011ರಂದು ಭಾಷಾ ಭಾವೈಕ್ಯತಾ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ.'

ಇ) ಮೈಸೂರಿನಲ್ಲಿ ದಿನಾಂಕ:10-05-2010 ರಂದು ಭಾಷಾ ಭಾವೈಕ್ಯತಾ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ.

ಈ) ಚಿತ್ರದುರ್ಗ ಸಾಣೇಹಳ್ಳಿಯಲ್ಲಿ ದಿನಾಂಕ: ಜೂನ್ 16-17-2010 ರಂದು ಭಾಷಾ ಭಾವೈಕ್ಯತಾ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ.

ಉ) ಬೀದರ್‌ನಲ್ಲಿ ದಿನಾಂಕ:ಜೂನ್ 22-23-2010 ರಂದು ಭಾಷಾ ಭಾವೈಕ್ಯತಾ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ.

ಊ) ಗೋವಾದ ಪಣಜಿಯಲ್ಲಿ ಭಾಷಾ ಭಾವೈಕ್ಯತಾ ಸಮಾವೇಶವನ್ನು ದಿನಾಂಕ:2-10-2010 ಮತ್ತು 3-10-2010 ರಂದು ಹಮ್ಮಿಕೊಳ್ಳಲಾಗಿದೆ.

4. ಗಡಿನಾಡು ಕನ್ನಡಿಗರ ಜಾಗೃತಿ ಸಮಾವೇಶ: ದಿನಾಂಕ: 28-2-2010 ರಂದು ತಳಿ ಡಂಕಣಿ ಕೋಟೆ ತಾಲ್ಲೂಕು ಕೃಷ್ಣಗಿರಿ ಜಿಲ್ಲೆ ತಮಿಳುನಾಡಿನಲ್ಲಿ ಕನ್ನಡ ಜಾಗೃತಿ ವೇದಿಕೆ ಕರ್ನಾಟಕ ಸಹಕಾರದೊಂದಿಗೆ ಜಾನಪದ ತಂಡಗಳಿಂದ ಭಾಷಾ ಭಾವೈಕ್ಯತೆ, ಸಾಂಸ್ಕೃತಿಕ ಮೆರವಣಿಗೆ/ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲಾಗಿದೆ.

5. ಅನುದಾನ:

1. ಕರ್ನಾಟಕದ ಗಡಿಭಾಗದಲ್ಲಿರುವ ತಾಲ್ಲೂಕು ಹಾಗೂ ಜಿಲ್ಲೆಗಳಿಗೆ ಕನ್ನಡ ಉಳಿಸುವ ಹಾಗೂ ಬೆಳೆಸುವ ನಿಟ್ಟಿನಲ್ಲಿ ಕನ್ನಡ ಸಾಂಸ್ಕೃತಿಕ ಚಟುವಟಿಕೆಗಳು ನಿರಂತರವಾಗಿ ನಡೆಯಲು ಕನ್ನಡ ಭವನ/ಗಡಿ ಭವನಗಳ ಅಗತ್ಯವಿದ್ದು, ಗಡಿ ತಾಲ್ಲೂಕು ಹಾಗೂ ಜಿಲ್ಲೆಗಳಿಗೆ ಕನ್ನಡ ಭವನ ನಿರ್ಮಾಣಕ್ಕೆ 1) ಖಜೂರಿ, ಆಳಂದ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ, 2) ಕುದೂರು ಗ್ರಾಮ, ರಾಮನಗರ ಜಿಲ್ಲೆ, 3) ಶಿರಾ, ತುಮಕೂರು ಜಿಲ್ಲೆ, 4) ಮಂಚೇನಹಳ್ಳಿ ಗ್ರಾಮ, ಚಿಕಬಳ್ಳಾಪುರ ಜಿಲ್ಲೆ, 5) ಅಗರಖೇಡ, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆಗಳಿಗೆ ತಲಾ ರೂ. 5.00 ಲಕ್ಷ ಮತ್ತು 1) ಗುಲಬರ್ಗಾ ನಗರ, 2) ದಾವಣಗೆರೆ, 3) ಮೈಸೂರು, 4) ಕಾರವಾರಗಳಿಗೆ ತಲಾ ರೂ.7.00 ಲಕ್ಷಗಳಂತೆ 5 ತಾಲ್ಲೂಕು ಹಾಗೂ 5 ಜಿಲ್ಲೆಗಳಿಗೆ ಒಟ್ಟು ರೂ. 53 ಲಕ್ಷಗಳ ಅನುದಾನ ನೀಡಲಾಗಿದೆ.

2) ಪ್ರಾಧಿಕಾರ ಮತ್ತು ಭಾರತಿ ಕಲಾಸದನ, ಎಡನೀರು ಮಠ, ಕಾಸರಗೋಡು ಇವರ ಸಹಯೋಗದೊಂದಿಗೆ ಕನ್ನಡ ಸಾಂಸ್ಕೃತಿಕ ಉತ್ಸವವನ್ನು ದಿನಾಂಕ: 12-02-2010 ರಿಂದ 16-02-2010 ರವರೆಗೆ

ನಡೆಸಿದ್ದು, ಸಾಂಸ್ಕೃತಿಕ ಕಾರ್ಯಕ್ರಮಗಳಾದ ಮಕ್ಕಳ ಯಕ್ಷಗಾನ, ಭರತನಾಟ್ಯ, ಸುಗಮ ಸಂಗೀತ ನಡೆಲಾಗಿದೆ. ಈ ಕಾರ್ಯಕ್ರಮಕ್ಕೆ ರೂ. 1.60 ಲಕ್ಷಗಳ ಖರ್ಚು ತಗುಲಿದೆ.

6). ಬೆಳಗಾವಿಯಲ್ಲಿ ಕನ್ನಡ ಚಿಂತನೆ ಕಾರ್ಯಕ್ರಮವನ್ನು ದಿನಾಂಕ:10–8–2010 ರಂದು ಹಮ್ಮಿಕೊಳ್ಳಲಾಗಿದೆ.

7. ಮಧುಗಿರಿಯಲ್ಲಿ ರಸಗ್ರಹಣ ಕಾರ್ಯಕ್ರಮವನ್ನು ದಿನಾಂಕ: 31–7–2010 ರಂದು ನಡೆಸಲಾಗಿದೆ.

8. ಕನ್ನಡ ನುಡಿತೇರು ಕಾರ್ಯಕ್ರಮವನ್ನು ದಿನಾಂಕ:19–8–2010 ರಂದು ಪಾವಗಡದಲ್ಲಿ ಹಮ್ಮಿಕೊಳ್ಳಲಾಗಿದೆ.

9. 2010–11ನೇ ಸಾಲಿನಲ್ಲಿ ಕರ್ನಾಟಕದ ಗಡಿ ಭಾಗದಲ್ಲಿರುವ ತಾಲ್ಲೂಕು ಹಾಗೂ ಜಿಲ್ಲೆಗಳಿಗೆ ಕನ್ನಡ ಭವನ ನಿರ್ಮಾಣಕ್ಕೆ 1. ಇಂಡಿ, ಬಿಜಾಪುರ ಜಿಲ್ಲೆ, 2. ಚಿಕ್ಕೋಡಿ, ಬೆಳಗಾವಿ ಜಿಲ್ಲೆ, 3. ಸಾವದಗಿ ಗುಲಬರ್ಗಾ ಜಿಲ್ಲೆ, 4. ಯಲ್ಲಾಪುರ, ಕಾರವಾರಗಳಿಗೆ ತಲಾ ರೂ.7.50 ಲಕ್ಷ, 1. ಮಳವಳ್ಳಿ ಮಂಡ್ಯ ಜಿಲ್ಲೆ, 2. ಪಿರಿಯಪಟ್ಟಣ, ಮೈಸೂರು ಜಿಲ್ಲೆ, 3. ಪಾವಗಡ, ತುಮಕೂರು ಜಿಲ್ಲೆ. 4. ಭಾಲ್ಕಿ ಬೀದರ್ ಜಿಲ್ಲೆಗಳಿಗೆ ತಲಾ ರೂ.10.00 ಲಕ್ಷ ಮತ್ತು 1. ಬೀದರ್ ನಗರ, 2. ಹೂಟಗಳ್ಳಿ, ಮೈಸೂರು ನಗರಗಳಿಗೆ ತಲಾ ರೂ. 15.00 ಲಕ್ಷಗಳ ಅನುದಾನ ನೀಡಲಾಗಿದೆ.

ಐ.ಟಿ.ಐ. ಶಿಕ್ಷಣ ಸಂಸ್ಥೆಗಳ ಕಟ್ಟಡ ಉಪನ್ಯಾಸಕರ ಕೊರತೆ

33(34): ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ): ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಾಗೇಪಲ್ಲಿ ಗುಡಿಬಂಡೆ ತಾಲ್ಲೂಕುಗಳಲ್ಲಿ ಐ.ಟಿ.ಐ. ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಲಾಗಿದ್ದು ಸ್ವಂತ ಕಟ್ಟಡ ಸೌಲಭ್ಯ ಹಾಗೂ ಶಿಕ್ಷಕರು ಇಲ್ಲದೇ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಸದರಿ ಸಮಸ್ಯೆಯನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು):

ಅ) ಹೌದು.

ಆ) ಬಾಗೇಪಲ್ಲಿಯಲ್ಲಿ ಸ್ವಂತ ಕಟ್ಟಡ ನಿರ್ಮಿಸಲು 7.23 ಎಕರೆ ನಿವೇಶನವನ್ನು ಸ್ವಾಧೀನ ಪಡಿಸಿಕೊಂಡಿದ್ದು ನಬಾರ್ಡ್ ಅಡಿ ಪರಿಗಣಿಸಲು